# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತು ಸದಸ್ಯರು : ಶ್ರೀ ಎಂ. ನಾರಾಯಣಸ್ವಾಮಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 843

ಉತ್ತರಿಸಬೇಕಾದ ದಿನಾಂಕ : 15.12.2020

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಂದಿನಿ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲು ನಂದಿನಿ ಸಂಚಾರಿ ವಾಹನಕ್ಕೆ ಚಾಲನೆ ನೀಡಲಾಗಿದ್ದು, ಈ ಯೋಜನೆಯು ಯಶಸ್ವಿಯಾಗಿದೆಯೇ; | ನಂದಿನಿ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲು ಕೆಎಂಎಫ್ ಮತ್ತು ಸದಸ್ಯ ಜಿಲ್ಲಾ ಹಾಲು ಒಕ್ಕೂಟಗಳ ಮೂಲಕ ನಂದಿನಿ ಸಂಚಾರಿ ವಾಹನಕ್ಕೆ ಚಾಲನೆ ನೀಡಲಾಗಿದ್ದು ಯೋಜನೆಯು ಯಶಸ್ವಿಯಾಗಿದೆ. |
| ಆ) | ಯಶಸ್ವಿಯಾಗಿದ್ದಲ್ಲಿ, ಇತರೆ ಜಿಲ್ಲೆಗಳಲ್ಲೂ ಸಂಚಾರಿ ವಾಹನಗಳಿಗೆ ಚಾಲನೆ ನೀಡುವ ಆಲೋಚನೆಯಿದೆಯೇ; | ಈಗಾಗಲೇ ಕರ್ನಾಟಕ ಹಾಲು ಮಹಾಮಂಡಳಿ ಮತ್ತು ಸದಸ್ಯ ಜಿಲ್ಲಾ ಹಾಲು ಒಕ್ಕೂಟಗಳಾದ ಕೋಲಾರ, ಮೈಸೂರು, ಚಾಮರಾಜನಗರ, ತುಮಕೂರು, ಹಾಸನ, ಧಾರವಾಡ, ಬೆಳಗಾವಿ, ವಿಜಯಪುರ, ದಕ್ಷಿಣಕನ್ನಡ, ಶಿವಮೊಗ್ಗಗಳಿಂದ ನಂದಿನಿ ಸಂಚಾರಿ ಉತ್ಪನ್ನಗಳ ವಾಹನಕ್ಕೆ ಚಾಲನೆಗೊಳಿಸಿದ್ದು, ಮುಂದಿನ ದಿನಗಳಲ್ಲಿ ಇತರೆ ಎಲ್ಲಾ ಒಕ್ಕೂಟಗಳಲ್ಲೂ ವಿಸ್ತರಿಸಲು ಆಯೋಜಿಸಲಾಗಿದೆ. |
| ಇ) | ನಂದಿನಿ ಸಂಚಾರಿ ವಾಹನಗಳಿಂದ ವ್ಯಾಪಾರ ನಡೆಸಲು ಇದರ ಫ್ರಾಂಚೈಸಿಯನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು; | 1) ನಂದಿನಿ ಸಂಚಾರಿ ವಾಹನ ಹೊಂದುವಆಸಕ್ತರು ಸುಸ್ಥಿಯಲ್ಲಿರುವ ಕನಿಷ್ಠ 3 ಟನ್ ಸಾಮರ್ಥ್ಯದ ವಾಹನ ಹೊಂದಿರಬೇಕು.<br>2) ಕನಿಷ್ಠ 2 ಸಂಖ್ಯೆಯ ಸಿಬ್ಬಂದಿ (ಚಾಲಕ ಮತ್ತು ಸಹಾಯಕ) ರನ್ನು ಹೊಂದಿರಬೇಕು..<br>3) ವಾಹನಕ್ಕೆ ಜಿಪಿಎಸ್ ಸಿಸ್ಟಮ್ ಅಳವಡಿಸಿರಬೇಕು.<br>4) ಕೂಲರ್ ಮತ್ತು ಫ್ರೀಜರ್ ಚಾಲನೆಗೆ ಅವಶ್ಯಕತೆಗೆ ತಕ್ಕಂತೆ ವಾಹನಕ್ಕೆ ಜನರೇಟರ್ ಅಳವಡಿಸಿರಬೇಕು.<br><br>ಈ ಅರ್ಹತೆ ಹೊಂದಿರುವ ಕರ್ನಾಟಕ ಹಾಲು ಮಹಾಮಂಡಳಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಪರಿಶೀಲಿಸಿ ನಂತರ ಅನುಕ್ರಮವಾಗಿ ಮಾರುಕಟ್ಟೆ ವ್ಯಾಪ್ತಿಗೆ ಬೇಡಿಕೆ ಅನುಸಾರ ಆಯ್ಕೆ ಮಾಡಿಕೊಳ್ಳಲಾಗುವುದು. |

| | | |
|---|---|---|
| ಈ) | ನಂದಿನಿ ಬೂತ್/ಪಾರ್ಲರ್‌ಗಳಲ್ಲಿ ಕೇವಲ ಬಾದಾಮಿ ಹಾಲು ಅಥವಾ ಕಾಫಿ ಮಾತ್ರ ಮಾರಲು ಕಡ್ಡಾಯ ಆದೇಶವೇನಾದರೂ ಇದೆಯೇ; ಅಥವಾ ಟೀ, ಕಷಾಯಗಳನ್ನು ಮಾರಬಹುದೇ; | 1) ನಂದಿನಿ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವ ಸ್ಥಳಗಳಿಗೆ ಬೂತ್ ಅಥವಾ ಪಾರ್ಲರ್‌ಗಳೆಂದು ಕರೆಯಲಾಗುವುದು, ಇಲ್ಲಿ ಯಾವುದೇ ರೀತಿ ಕಾಫಿ ಮತ್ತು ಟೀ ಮಾರಾಟ ಮಾಡಲು ಅವಕಾಶವಿರುವುದಿಲ್ಲ.<br><br>2) ಆಸಕ್ತರು ಆಯ್ದಾ ಸ್ಥಳಗಳಲ್ಲಿ ಬಂಡವಾಳ ಹೂಡಿ ಇತರೆ ಉತ್ಪನ್ನಗಳೊಂದಿಗೆ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುವ ಸ್ಥಳಗಳಿಗೆ ಪ್ರಾಂಚೈಸಿ ಎಂದು ಕರೆಯಲಾಗುತ್ತದೆ ಮತ್ತು ನಂದಿನಿ ಪ್ರಾಂಚೈಸಿಗಳಲ್ಲಿ ಕಾಫಿ ಮತ್ತು ಟೀ ಮಾರಾಟ ಮಾಡಲು ಅವಕಾಶವಿದೆ. |
| ಉ) | ರಾಜ್ಯದಲ್ಲಿರುವ ಒಟ್ಟು ನಂದಿನಿ ಪಾರ್ಲರ್ ಕೆ.ಎಂ.ಎಫ್.ನಿಂದ ಯಾವ ಯಾವ ರಾಜ್ಯಗಳಿಗೆ ಎಷ್ಟು ಪ್ರಮಾಣದಲ್ಲಿ ಹಾಲನ್ನು ಸರಬರಾಜು ಮಾಡಲಾಗುತ್ತಿದೆ? | ವಿವಿಧ ಜಿಲ್ಲಾ ಹಾಲು ಒಕ್ಕೂಟಗಳಿಂದ ನೆರೆಯ ರಾಜ್ಯಗಳಾದ ತಮಿಳುನಾಡು, ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾಗಳಲ್ಲಿ ನಂದಿನಿ ರೀಟೇಲ್ ಹಾಲು ದಿನವಹಿ ಸರಾಸರಿ ಮಾರಾಟವು ಈ ಕೆಳಕಂಡಂತಿದೆ.<br>• ತಮಿಳುನಾಡು : 5,000 ಲೀಟರ್<br>• ಆಂಧ್ರಪ್ರದೇಶ ಮತ್ತು ತೆಲಂಗಾಣ: 53,000 ಲೀಟರ್<br>• ಮಹಾರಾಷ್ಟ್ರ : 1.10 ಲಕ್ಷ ಲೀಟರ್<br>• ಗೋವಾ: 25,000 ಲೀಟರ್ |

ಕಡತ ಸಂಖ್ಯೆ: ಸಿಒ 104 ಪಿಎಂಸಿ 2020

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು